**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 231/2022

**ಸಾಕ್ಷಿಯನ್ನು ದಿನಾಂಕ** 10.9.2025 **ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಭಾನುಮತಿ | ಪಿ.ಡಬ್ಲ್ಯೂ–14 |
| ತಂದೆಯ/ಗಂಡನ ಹೆಸರು | : | ನಟರಾಜು | ಸಿ.ಡಬ್ಲ್ಯೂ–23 |
| ವಯಸ್ಸು | : | 35 | |
| ಉದ್ಯೋಗ | : | ಮನೆ ಕೆಲಸ | |
| ವಾಸ ಸ್ಥಳ | : | ಹೆಬ್ಬಾಳ 1 ನೇ ಹಂತ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ನಂಜಮ್ಮ ನವರು ನಮ್ಮ ಮನೆ ಎದುರುಗಡೆ ವಾಸವಿದ್ದರು. ನ್ಯಾಯಾಲಯದ ಮುಂದಿರುವ ಆರೋಪಿ ನಾಗಮ್ಮಳು ನಂಜಮ್ಮಳ ಸೊಸೆ ಇರುತ್ತಾರೆ. ಆರೋಪಿತರಿಗೆ ಸಿತಾರ, ಲಾವಣ್ಯ ಮತ್ತು ಸಿದ್ದರಾಜುರವರು ಮಕ್ಕಳಿರುತ್ತಾರೆ. ನಾಗಮ್ಮಳ ಗಂಡ ಮರಣ ಹೊಂದಿರುತ್ತಾರೆ. ನಂಜಮ್ಮ 2 ನೇ ಮಹಡಿಯ ರೂಂನಲ್ಲಿ ವಾಸವಿದ್ದರು, ಆರೋಪಿತಳು ಮಕ್ಕಳ ಜೊತೆ 1 ನೇ ಮಹಡಿಯ ಮನೆಯಲ್ಲಿ ವಾಸವಿದ್ದರು. ನಂಜಮ್ಮ ಮರಣ ಹೊಂದುವ ಕಾಲಕ್ಕೆ

ಲಾವಣ್ಯಳ ಮದುವೆಯಾಗಿದ್ದು ಬಾಣಂತನಕ್ಕೆ ಬಂದಿದ್ದಳು. ನಂಜಮ್ಮಳು ಊಟ ತಿಂಡಿಯನ್ನು ಅವರೇ ಮಾಡಿಕೊಳ್ಳುತ್ತಿದ್ದರು. ಆಸ್ಪತ್ರೆಗೆ ಹೋಗುವಾಗ ಆರೋಪಿತಳ ಮಗ ಸಿದ್ದರಾಜು ಕರೆದುಕೊಂಡು ಹೋಗುತ್ತಿದ್ದ. ದಿನಾಂಕ 2.10.2021 ರಂದು ನಾನು ಮನೆಕೆಲಸಕ್ಕೆ ಹೋಗಿ ಮದ್ಯಾಹ್ನ 1.30 ಕ್ಕೆ ವಾಪಸ್ ಮನೆಗೆ ಬಂದೆ. ಆ ಕಾಲಕ್ಕೆ ನಮ್ಮ ಮನೆ ಪಕ್ಕದ ಕವಿತಾ ಎಂಬುವವರು ನಂಜಮ್ಮ ತೀರಿ ಹೋಗಿದ್ದಾರೆ ಎಂದು ಹೇಳಿದರು. ಆ ಕಾಲಕ್ಕೆ ನಂಜಮ್ಮ ವಾಸವಿದ್ದ ಮನೆಗೆ ಹೋಗಿ ನೋಡಿರುವುದಿಲ್ಲ. ಶವವನ್ನು ಕೆಳಕ್ಕೆ ತಂದಾಗ ನೋಡಿರುತ್ತೇನೆ. ನಾನು ಶವ ನೋಡಲು ಹೋದಾಗ ಆರೋಪಿತೆ ಮತ್ತು ಅವರ ಮಕ್ಕಳು ಇದ್ದರು. ಆಗ ನಂಜಮ್ಮಳ ಹೆಣ್ಣು ಮಕ್ಕಳನ್ನು ನೋಡಿರುವುದಿಲ್ಲ. ನಂಜಮ್ಮ ಹೇಗೆ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಬೇರೆಯವರೂ ಸಹ ನಂಜಮ್ಮ ಹೇಗೆ ಮರಣ ಹೊಂದಿರುತ್ತಾರೆ ಎಂದು ಹೇಳಿಲ್ಲ. ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದರು. ಆ ಕಾಲಕ್ಕೂ ಸಹ ನಂಜಮ್ಮ ಹೇಗೆ ಮರಣ ಹೊಂದಿರುತ್ತಾರೆ ಎಂದು ಗೊತ್ತಾಗಿಲ್ಲ. ನಂಜಮ್ಮಳ ಜೊತೆ ನ್ಯಾಯಾಲಯದ ಮುಂದಿರುವ ಆರೋಪಿತೆ ಮತ್ತು ಅವರ ಮಕ್ಕಳು ಚನ್ನಾಗಿದ್ದರು.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ, ಪರಿಶೀಲಿಸಿ ಸಕಾರಣಗಳಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನಂಜಮ್ಮಳಿಗೂ ನ್ಯಾಯಾಲಯದ ಮುಂದಿರುವ ಆರೋಪಿತೆ ಮತ್ತು ಅವರ ಮಕ್ಕಳಿಗೂ ಅಷ್ಟೊಂದು ಹೊಂದಾಣಿಕೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿತೆ ಮತ್ತು ಅವರ ಮಕ್ಕಳು ನಂಜಮ್ಮಳಿಗೆ ಹಲವು ಬಾರಿ ಹಲ್ಲೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂಜಮ್ಮಳು ಈ ಮನೆಯಲ್ಲಿ ನನ್ನ ಹೆಣ್ಣುಮಕ್ಕಳಿಗೂ ಸಹ ಪಾಲು ಬರಬೇಕೆಂದು ಹೇಳುತ್ತಿದ್ದರಿಂದ ಆರೋಪಿತೆ ಮತ್ತು ಅವರ ಮಕ್ಕಳು ಅವರೊಂದಿಗೆ ಜಗಳ ಮಾಡಿ ಹಲ್ಲೆ ಮಾಡುತ್ತಿದ್ದರು ಎಂದರೆ ನಾನು ನೋಡಿಲ್ಲ. ದಿನಾಂಕ 2.10.2021 ರಂದು ಸಂಜೆ 6.30 ಗಂಟೆಗೆ ನಂಜಮ್ಮಳು ನಮ್ಮ ಮನೆಯ ಪಕ್ಕದ ನಂದಿನಿ ಎಂಬುವವರ ಮನೆಗೆ ಟಿ.ವಿ ನೋಡಲು ಹೋಗಿ ವಾಪಸ್ ಹೋಗಿರುವುದನ್ನು ನಾನು ನೋಡಿರುತ್ತೇನೆ ಎಂದರೆ ನಿಜ. ದಿನಾಂಕ 3.10.2021 ರಂದು ಮದ್ಯಾಹ್ನ 1.30 ರಲ್ಲಿ ನಾನು ಕೆಲಸದಿಂದ ಮನೆಗೆ ಬಂದಾಗ ಕವಿತ ಎಂಬುವವರು ನಂಜಮ್ಮ ಮರಣ ಹೊಂದಿರುವ ಬಗ್ಗೆ ನನಗೆ ತಿಳಿಸಿದರು ಎಂದರೆ ನಿಜ. ಆ ಕಾಲಕ್ಕೆ ನಾನು ನಂಜಮ್ಮ ವಾಸವಿದ್ದ ರೂಂಗೆ ಹೋಗಿ ನೋಡಿದಾಗ ಆ ಕಾಲಕ್ಕೆ ಆರೋಪಿತಳ ಮಕ್ಕಳಾದ ಸಿತಾರ ಮತ್ತು ಸಿದ್ದರಾಜು ಮತ್ತು ಆರೋಪಿತೆ ಆ ಸ್ಥಳದಲ್ಲಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಎಷ್ಟೇ ಕೂಗಿದರೂ ನಂಜಮ್ಮ ಎದ್ದಿರಲಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯದ ಮುಂದಿರುವ ಆರೋಪಿತೆ ಮತ್ತು ಅವರ ಮಕ್ಕಳು ಸೇರಿ ನಂಜಮ್ಮಳ ತಲೆಗೆ ಮರದ ಹಿಟ್ಟಿನ ದೊಣ್ಣೆಯಿಂದ ಹಲ್ಲೆ ಮಾಡಿ ಮೂಗು ಮತ್ತು ಬಾಯಿಗೆ ಪ್ಲಾಸ್ಟಿಕ್ ಕವರನ್ನು ಕಟ್ಟಿ ಉಸಿರುಗಟ್ಟಿಸಿ ಸಾಯಿಸಿರುವ ಬಗ್ಗೆ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನಂಜಮ್ಮ ಹಾಗೂ ನಾಗಮ್ಮನವರ ಕುಟುಂಬಕ್ಕೂ ---------------------------- ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ24 ಎಂದು ಗುರುತಿಸಿದೆ.

ಆಗ ನಾನು ನಂಜಮ್ಮಳು ವಾಸವಾಗಿದ್ದ ರೂಂ ಬಳಿ -------------- ---------------------- ಈ ದಿನ ನನಗೆ ಪೋಲಿಸ್ ಠಾಣೆಯಲ್ಲಿ ಗೊತ್ತಾಯಿತು ಎಂದು ಸಹ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ24 ಎ ಎಂದು ಗುರುತಿಸಿದೆ.

ಈಗಲೂ ಸಹ ನಾನು ಅದೇ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ನಿಜ. ಈಗಲೂ ಸಹ ನಾನು ಆರೋಪಿತೆ ಮತ್ತು ಅವರ ಮಕ್ಕಳ ಜೊತೆ ಮಾತನಾಡುತ್ತೇನೆ

ಎಂದರೆ ನಿಜ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್.ಎನ್.ಆರ್ ವಕೀಲರಿಂದಃ

ನಂಜಮ್ಮಳಿಗೆ 75-80 ವರ್ಷ ವಯಸ್ಸಾಗಿತ್ತು ಎಂದರೆ ನಿಜ. ನಂಜಮ್ಮಳಿಗೆ ಆರೋಪಿತೆ ಮತ್ತು ಅವರ ಮಕ್ಕಳು ಊಟ ನೀಡುತ್ತಿದ್ದರು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು